ಇ) ಅನುದಾನವನ್ನು ಮುನ್ಸಿಪಾಲಿಟಿಗಳ ಆರ್ಥಿಕ ಸ್ಥಿತಿಯನ್ನು ಆಧರಿಸಿ ಮಂಜೂರು ಮಾಡುತ್ತಿರುವುದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ವಿಷಯ :- ಸಿರ್ಸಿ- ಅಂಕೋಲಾ ತಾಲ್ಲೂಕುಗಳಲ್ಲಿ ರೇಷ್ಮೆ ಬೆಳೆಯ ಬಗ್ಗೆ ಯೋಜನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 844 (1366)

ಶ್ರೀ ವಿಶ್ವೇಶ ಹೆಗ್ಗಡೆ (ಅಂಕೋಲಾ) :- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿರ್ಸಿ-ಯಲ್ಲಾಪುರ-ಅಂಕೋಲಾ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯಲು ಸರ್ಕಾರದವರು ಕೈಗೊಂಡಿರುವ ಯೋಜನೆಗಳಾವುವು?

ಆ) 1995-96 ನೇ ಸಿರ್ಸಿ- ಯಲ್ಲಾಪುರ - ಅಂಕೋಲಾ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆದಿದ್ದು ಎಷ್ಟು? (ತಾಲ್ಲೂಕುವಾರು ಎಕರೆವಾರು ವಿವರ ನೀಡುವುದು).

ಇ) ರೇಷ್ಮೆ ಬೆಳೆ: ಕಡಿಮೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು) :-

ಅ) 1) ಜಿಲ್ಲಾ ವಲಯ ಯೋಜನೆ ಅಡಿಯಲ್ಲಿ

ಸಲಹಾ ಸೇವೆಗಳು, ಪ್ರಚಾರ ಮತ್ತು ದೃಶ್ಯ, ಶ್ರಾವ್ಯ ಕಾರ್ಯಕ್ರಮ ಅಡಿಯಲ್ಲಿ ಕ್ಷೇತ್ರೋತ್ಸವಗಳು, ತಾಲ್ಲೂಕು ಮಟ್ಟದ ಕಾರ್ಯಗಾರ ಪ್ರದರ್ಶನ ತಾಕುಗಳು, ರೇಷ್ಮೆ ಸಾಹಿತ್ಯ ಮುಂತಾದವುಗಳು.

2) ತರಬೇತಿ ಮತ್ತು ಅಧ್ಯಯನ ಪ್ರವಾಸ

3) ರೋಗ ನಿಯಂತ್ರಣ.

4) ಮಹಿಳೆಯರಿಗಾಗಿ ವಿಶೇಷ ಪ್ರಾತ್ಯಾಕ್ಷಣಾ ಕ್ಷೇತ್ರ.

ವಿಶೇಷ ಘಟಕ ಯೋಜನೆ ಅಡಿಯಲ್ಲಿ

1) ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಶೇಕಡ 60 ಸಹಾಯ ಧನ.

2) ಹೊಸದಾಗಿ ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹ ಧನ.

3) ಪ್ಯಾಕೇಜ್ ಬೆನಿಫಿಟ್ಸ್.

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಅಡಿಯಲ್ಲಿ

1) ಹಿಪ್ಪುನೇರಳೆ ಸಸಿಗಳನ್ನು ಬೆಳೆಸಿ ಮಾರಾಟ ಮಾಡುವುದು.

2) ಹಿಪ್ಪುನೇರಳೆ ಮರ ಬೆಳೆಸುವ ಪ್ರಾತ್ಯಾಕ್ಷತಾ ಘಟಕ

3) ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಶೇಕಡ 75 ಸಹಾಯ ಧನ.

ಅ)	ವಿವರ	ಸಿರಸಿ	ಯಲ್ಲಾಪುರ	ಅಂಕೋಲ
1.	ಹಿಪ್ಪುನೇರಳೆ ವಿಸ್ತೀರ್ಣ (ಎಕರೆಗಳಲ್ಲಿ)	279.25	167.20	122.10
2.	ಉತ್ಪಾದಿಸಿದ ಗೂಡಿನ ಪ್ರಮಾಣ (ಮೆ.ಟನ್ನು)	25.5	10.0	4.2
3.	ಸರಾಸರಿ ಇಳುವರಿ 100 ಮೊಟ್ಟಗೆ (ಕೆ.ಜಿ. ಗಳಲ್ಲಿ)	59.5	54.3	45.8

ಇ) ಬಂದಿರುತ್ತೆ.

ಯಲ್ಲಾಪುರ ತಾಲ್ಲೂಕಿನಲ್ಲಿ ಮಾತ್ರ ಕಳೆದ ಸಾಲಿಗಿಂತ ಸ್ವಲ್ಪ ಕಡಿಮೆ ಗೂಡಿನ ಉತ್ಪಾದನೆ ಕಡಿಮೆಯಾಗಿರುತ್ತದೆ.

ಈ) ಉಪ ಪ್ರಶ್ನೆ "ಬಿ"ನಲ್ಲಿ ಸೂಚಿಸಿರುವ ಕಾರ್ಯಕ್ರಮಗಳನ್ನು ಗೂಡಿನ ಉತ್ಪಾದನೆಯನ್ನು ಹೆಚ್ಚಿಸಲು ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಷಯ :-ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 845 (752)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು (ಅವುಗಳ ವಿವರಗಳನ್ನು ಒದಗಿಸುವುದು)?

ಆ) ರಾಜ್ಯದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆಯೇ?.

ಶ್ರೀ ಉಮೇಶ ವಿ. ಕತ್ತಿ (ಸಕ್ಕರೆ ಸಚಿವರು) :-

ಅ) ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳಿರುತ್ತವೆ. ಇವುಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು, ರಾಜ್ಯದಲ್ಲಿ ಇನ್ನೂ 24 ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆ.